

ತಾಯಿ ಸುವರ್ಣಕ್ಕನಿಗೂ ಬೇರೆ ಪೈಕಿಯ ಸೊಸೆಯನ್ನು ತರಲು ಮುದ್ದಾಂ ಮನಸ್ಸಿರಲಿಲ್ಲ. ಅವರ ಊರಿನಲ್ಲೇ ಎಷ್ಟು ಮನೆಗಳಲ್ಲಿ ಅಂಥದ್ದು ನಡೆದಿಲ್ಲ ಈಗ? ವಂಶ ಮುಂದುವರೆಯಲು ಅಂತ ಆಪದ್ಧರ್ಮ ಹೇಳಿ ಹಾವೇರಿ ಬದಿಯಿಂದ ತಂದ ಸೊಸೆಯಂದಿರಿದ್ದಾರೆ. ಹಾಗೆ ಜಾತಿ, ಧರ್ಮಕ್ಕೆ ಇನ್ನೂ ಕಚ್ಚಿಕೊಂಡವರು ಉತ್ತರಭಾರತದಿಂದ ಹೆಣ್ಣು ತಂದು ಇಲ್ಲಿನ ಭಾಷೆ, ಸಂಪ್ರದಾಯಕ್ಕೆ ಸಜ್ಜು ಮಾಡಿದವರಿದ್ದಾರೆ. ಇದ್ಯಾವುದಕ್ಕೂ ಸೊಪ್ಪು ಹಾಕದೇ ಮದುವೆಯ ಆಶೆಯನ್ನೇ ಬಿಟ್ಟು ಕುಡಿದು ಕುಗ್ಗಿ ಗಳಪಾಸ ಹಾಕಿಕೊಂಡ ಯುವಕರೂ ಇಲ್ಲದಿಲ್ಲ.

ಅಪ್ಪ- ಮಗ ಕೂತು ವಿಚಾರ ಮಾಡಿದಾಗ ಹೊಳೆದಿದ್ದು ಆ ಉಪಾಯ... ಹೇಗೂ ಮೂಲೆಬೇಣದ ಅವರ ಜಮೀನಿಗೆ ಆಯುರ್ವೇದಿಕ್ ಡಾಕ್ಟರ್ ದಂಪತಿಗಳು ತಾವಾಗಿಯೇ ಕೇಳಿ ಬಂದಿದ್ದಿತ್ತು. ಅಲ್ಲಿ ಒಂದು ರೆಸಾರ್ಟ್ ನಮನಿ ಎಂಥದ್ದೋ ಮಾಡಿ ಆಯುರ್ವೇದದ ಚಿಕಿತ್ಸೆ ನಡೆಸುವ, ದೇಶದ ಮೂಲೆಯಿಂದೆಲ್ಲ ಜನ ಬಂದು ಉಳಿದು ಚಿಕಿತ್ಸೆ ಪಡೆಯುವ ಎಂಥದ್ದೋ ಪ್ರಾಜೆಕ್ಟು ಅವರದ್ದು... ಮಾಡಿಕೊಳ್ಳಲಿ.. ಮೂಲೆಬೇಣದಲ್ಲಿ ತಮಗಿದ್ದ ಉತ್ಪನ್ನವೂ ಅಷ್ಟಕ್ಕಷ್ಟೇ. ಮನೆಗೆ ತಾಗಿರುವ ಜಮೀನೇ ಮೂಲ ಆಧಾರ. ಹೀಗೆ ಒಂದು ಚಲೋ ರೇಟಿಗೆ ಮೂಲೆಬೇಣದ ಜಮೀನು ಮಾರಿ ಆ ದುಡ್ಡಲ್ಲಿ ಬೆಂಗಳೂರಿನಲ್ಲಿ ಒಂದು ಫ್ಲ್ಯಾಟು ಖರೀದಿಯಾಯ್ತು. ಮಹೇಶನಿಗೆ ಯಾವುದೋ ಕಂಪೆನಿಯಲ್ಲಿ ಕೆಲಸ ಸಿಗ್ತು ಅಂತ ಸಂಬಂಧಿಕರ ವಾಟ್ಸಾಪು ಗುಂಪುಗಳಲ್ಲಿ ಅಭಿನಂದನೆಗಳ ಮೆಸೇಜು ಸುರಿಯಿತು. ಹಾಗೇ ಮುಂದುವರೆದು ಹೊನ್ನಾವರದ ತುಸು ಬಡವರ ಕುಟುಂಬದ ಅಂತಲೇ ಹೇಳಬಹುದಾದ ಭಾಗ್ಯಶ್ರೀಯೊಂದಿಗೆ ಮಹೇಶನ ಮದುವೆ ಕವಡಿಕೆರೆ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಸಂಪನ್ನವೂ ಆಯಿತು!